

ಇದರಿಂದ ಅವನು ನಮ್ಮೆಲ್ಲರ ಅಚ್ಚುಮೆಚ್ಚಿನ ಗೆಳೆಯನಾಗಿ ಹೋಗಿದ್ದ. ಅನೇಕ ಬಾರಿ ಅವನು ಎಸೆದ ಚೆಂಡು ಶಾಲೆಯ ಆವರಣ ಗೋಡೆಯ ಆಚೆಗೆ ಹೋಗಿಬೀಳುತ್ತಿತ್ತು. ನಮ್ಮ ಆಟದ ನಿಯಮದ ಪ್ರಕಾರ, ಚೆಂಡನ್ನು ಶಾಲೆಯ ಆಚೆಗೆ ಎಸೆದವನೇ ಅದನ್ನು ಹೋಗಿ ತರಬೇಕಾಗುತ್ತಿತ್ತು. ವೀರಾಸಾಮಿಗೆ ಅದು ಸಾಮಾನ್ಯವಾಗಿ ಹೋಗಿತ್ತು.

ಶಾಲೆಯ ಆಚೆ ವಿರಾಮದ ಸಮಯದಲ್ಲಿ ನಮಗಾಗಿ ಕಾಯುತ್ತಿದ್ದ ಇಬ್ಬರೂ ಸ್ನೇಹಜೀವಿಗಳಿದ್ದರು. ಒಬ್ಬ ಶಿವಣ್ಣ. ಶಾಲೆಯ ರಸ್ತೆಯ ಪಕ್ಕದ ಕಾಲುದಾರಿಯಲ್ಲಿ ಶಾಲೆಯ ಹೊರಗೋಡೆಗೆ ಒರಗಿಕೊಂಡು, ಗೋಣಿತಟ್ಟಿನ ಮೇಲೆ ಕುಳಿತಿರುತ್ತಿದ್ದ. ಅವನ ಮುಂದೆ ಒಂದು ಅಗಲದ ಬುಟ್ಟಿ ಇರುತ್ತಿತ್ತು. ಅದರಲ್ಲಿ ಕಳ್ಳೆಕಾಯಿ, ಚೇಪೆಕಾಯಿ, ಗಿಣಿಮೂತಿ ಮಾವಿನಕಾಯಿ, ಸೌತೆಕಾಯಿಗಳ ಜೊತೆಗೆ, ಅಳತೆಗೆ ಚಟಾಕು, ಅರೆಪಾವು; ಒಂದು ಚಾಕು – ಮುರಿದ ಹ್ಯಾಕ್‌ಸಾ ಚೂಪು ಮಾಡಿದ್ದು, ಹಾಗೂ ಉಪ್ಪು–ಖಾರದ ಬಿಳಿ ಕೆಂಪು ಮಿಶ್ರಣ ತುಂಬಿಸಿದ ಆಕರ್ಷಕ ಗಾಜಿನಶೀಷೆ ಇರುತ್ತಿದ್ದವು. ಅವನ ಎದುರಿಗೆ ರಸ್ತೆಯ ಆಚೆ ಬದಿಯಲ್ಲಿ ಚಾಂದ್ ಪಾಷಾ ತನ್ನ ನೂಕು ಗಾಡಿಯಲ್ಲಿ ಕಟ್ಟಿದ್ದ ಗಂಟೆ ಬಾರಿಸುತ್ತ, ಐಸ್‌ಕ್ಯಾಂಡಿ ಮಾರುತ್ತಿದ್ದ.

ವೀರಾಸಾಮಿ ನಮಗಿಂತ ಮೊದಲೇ ಬಹಳ ಬೇಗ ಅವರಿಬ್ಬರ ಸ್ನೇಹ ಸಂಪಾದಿಸಿದ್ದ. ಅವನಿಗೆ ಬೇಕಾದ್ದನ್ನು ಅವರಿಬ್ಬರೂ ಬಾಯಿಸಾಲಕ್ಕೆ ತಕ್ಷಣ ಕೊಡುತ್ತಿದ್ದರು. ಅವನು ಅದನ್ನು ಮನಸ್ಸಿನಲ್ಲೇ ಲೆಕ್ಕ ಇಟ್ಟುಕೊಂಡಿರುತ್ತಿದ್ದ. ರಾಜಮ್ಮ ವಾರಕ್ಕೊ ಹತ್ತು ದಿನಕ್ಕೊ ಒಮ್ಮೆ ಅದನ್ನು ಚೌಕಾಸಿ ಮಾಡಿ ಚುಕ್ತಾ ಮಾಡುತ್ತಿದ್ದಳು.

ವೀರಾಸಾಮಿ ಅವರಿಬ್ಬರ ಬಳಿ ಸಾಲ ಮಾಡಿದ ಲೆಕ್ಕವನ್ನು ನಿದ್ದೆಯಲ್ಲಿ ಕೇಳಿದರೂ ಕರಾರುವಾಕ್ಕಾಗಿ ಹೇಳುತ್ತಿದ್ದ. ಸೋಮವಾರ 10 ಪೈಸೆ ಕಳ್ಳೆಕಾಯಿ, ಮಂಗಳವಾರ 6 ಪೈಸೆ ಐಸ್‌ಕ್ಯಾಂಡಿ, ಬುಧವಾರ ಒಂದು ಕೆಪ್ಪೆ ಗಿಣಿಮೂತಿ – ಹೀಗೆ ಹೇಳುತ್ತಿದ್ದರೆ ನಾವು ಬಾಯಿಬಿಟ್ಟುಕೊಂಡು ಕೇಳುತ್ತಿದ್ದೆವು. ಜೇಬಿನಲ್ಲಿ ಒಂದು ಪೈಸಾ ಇಲ್ಲದಿದ್ದರೂ ವೀರಾಸಾಮಿಗೆ ಕೇಳಿದ್ದನ್ನು ಶಿವಣ್ಣ, ಚಾಂದ್ ಪಾಷ ಕೊಡುತ್ತಿದ್ದುದು ನಮಗೆ ಒಂದು ವಿಸ್ಮಯದಂತೆ ಕಾಣಿಸುತ್ತಿತ್ತು; ಅವರಿಬ್ಬರೂ ವೀರಾಸಾಮಿಯೊಂದಿಗೆ ವಿಧೇಯತೆಯಿಂದ ಮಾತನಾಡುವುದೂ ಕೂಡ.

ತರಗತಿಯಲ್ಲಿ ಕೊನೆಯ ಬೆಂಚಿನ ಗೆಳೆಯನೊಬ್ಬ ವೀರಾಸಾಮಿಗೆ ಇಂಗ್ಲಿಷಿನಲ್ಲಿ ರುಜು ಹಾಕುವುದನ್ನು ಹೇಳಿಕೊಟ್ಟ. ವೀರಾಸಾಮಿಗೆ ಆದ ಆನಂದ ಹೇಳತೀರದು. ನಮ್ಮೆಲ್ಲರ ನೋಟ್ ಪುಸ್ತಕದ ಕೊನೆಯ ಪುಟದಲ್ಲಿ ತನ್ನ ಸಹಿ ಮಾಡಿ ಸಂತೋಷಪಟ್ಟಿದ್ದ. ತನ್ನ ಹೆಸರಿನ ಕೊನೆಯ ಅಕ್ಷರ ಇಂಗ್ಲಿಷಿನ 'ಐ' ಬರೆಯುತ್ತಾ ಅದನ್ನು ತನ್ನ ಹೆಸರಿನ ಕೆಳಗೆ ಗೀಟು ಬರುವಂತೆ ಎಳೆದು, ಕೆಳಗೆ ಎರಡು ಚುಕ್ಕೆ ಇಟ್ಟು, 'ಐ' ಅಕ್ಷರದ ಮೇಲೆ ಚುಕ್ಕೆಯ ಬದಲು ಒಂದು ಸಣ್ಣ ಸೊನ್ನೆಯನ್ನು ಸುತ್ತುತ್ತಿದ್ದ. ಇದನ್ನು ಹೇಳಿಕೊಟ್ಟು ಅವನಿಗೆ ಅಭ್ಯಾಸ ಮಾಡಿಸಿದ ಗೆಳೆಯನಿಗೆ ಮಧ್ಯಾಹ್ನದ ಬಿಡುವಿನಲ್ಲಿ ಇತರರಿಗೆ ಗೊತ್ತಾಗದಂತೆ ಕರೆದೊಯ್ದು ಒಂದು ಐಸ್‌ಕ್ಯಾಂಡಿ ಭಕ್ಷೀಸ್ ಕೊಡಿಸಿದ್ದ.

ಒಂದು ದಿನ ಗಣಿತದ ತರಗತಿಯಲ್ಲಿ ತ್ರೈರಾಶಿಯನ್ನು ಹೇಳಿಕೊಡುತ್ತಾ 'ಒಂದು ಕೆಲಸವನ್ನು ಒಬ್ಬನು ಮುಗಿಸಲು ಹತ್ತು ದಿನ ಬೇಕಾದರೆ, ಐದು ಮಂದಿ ಅದನ್ನು ಎಷ್ಟು ದಿನದಲ್ಲಿ ಮುಗಿಸುತ್ತಾರೆ?' ಎಂದು ಪ್ರಶ್ನೆಯನ್ನು ಕರಿಹಲಗೆಯ ಮೇಲೆ ಬರೆದು, ಉತ್ತರ ಕಂಡು ಹಿಡಿಯಲು ಹೇಳಿ ಉಪಾಧ್ಯಾಯರು ತರಗತಿಯಿಂದ ಆಚೆ ಹೋಗಿದ್ದರು. ನಾನು ಲೆಕ್ಕವನ್ನು ಮಾಡಿ ಮುಗಿಸಿದ್ದೆ. ಆಗ ವೀರಾಸಾಮಿ ನನ್ನ ಪಕ್ಕ ಬಂದು, 'ಅಲ್ಲ, ಓದುವುದು ಒಂದು ಕೆಲಸ ಅಲ್ವಾ. ಅದನ್ನು ಐದು ಜನ ಹೇಗೆ ಮಾಡುವುದು?' ಎಂದು ಕೇಳಿದ. ಅವನ ಪ್ರಶ್ನೆ ಕೇಳಿ 'ಹೌದಲ್ಲ' ಎನ್ನಿಸಿದರೂ 'ವೀರಾಸಾಮಿ ಇಲ್ಲಿ ಕೆಲಸ ಅಂದರೆ ಒಬ್ಬರು ಮಾಡುವುದಲ್ಲ. ತುಂಬಾ ಜನ ಸೇರಿ ಮಾಡುವ ಕೆಲಸ' ಎಂದೆ. ಅವನಿಗೆ ಪೂರ್ತಿ ಅರ್ಥವಾಗದೆ 'ಹಾಗಂದರೆ?' ಎಂದು ಕೇಳಿದ.

'ನೋಡು, ಒಂದು ಗೋಡೆ ಕಟ್ಟಲು ಒಬ್ಬನಿಗೆ ಹತ್ತು ದಿನ ಬೇಕು. ಆದರೆ ಐದು ಜನರು ಅದನ್ನು ಎಷ್ಟು ದಿನದಲ್ಲಿ ಕಟ್ಟಬಹುದು?' ಎಂದೆ. ಅವನ ಮುಖ ಅರಳಿತು. 'ಓ, ಗೊತ್ತಾಯ್ತು. ಎರಡೇ ದಿನದಲ್ಲಿ ಮುಗಿಸಬಹುದು' ಎಂದಾಗ, ಆಶ್ಚರ್ಯ ಪಡುವ ಸರದಿ ನನ್ನದು. 'ಸರಿಯಾಗಿ ಹೇಳಿದೆ' ಎಂದು ನಾನು ಅವನ ಕೈ ಕುಲುಕಿದ್ದೆ. ಅಂದು ಮಧ್ಯಾಹ್ನ ನನಗೆ ಐಸ್‌ಕ್ಯಾಂಡಿ ಕೊಡಿಸಿದ್ದ!

ಸ್ವಲ್ಪ ದಿನದಲ್ಲೇ ಗಣಿತದ ಉಪಾಧ್ಯಾಯರು 'ಭೇಷ್' ಅನ್ನುವ ಮಟ್ಟಕ್ಕೆ ಅವನ ಲೆಕ್ಕದ ಜ್ಞಾನ ಬೆಳೆದಿತ್ತು. ಆದರೆ ಕನ್ನಡ, ಇಂಗ್ಲಿಷ್, ಚರಿತ್ರೆ, ಭೂಗೋಳ, ಆರೋಗ್ಯ ಇವುಗಳು ಅಷ್ಟಕ್ಕಷ್ಟೇ. ಪರೀಕ್ಷೆಗೆ ಇನ್ನು ಒಂದು ತಿಂಗಳಿದೆ ಎನ್ನುವಾಗ ವೀರಾಸಾಮಿ ಪತ್ತೆಯೇ ಇಲ್ಲ. ಒಂದು ದಿನ ಮಧ್ಯಾಹ್ನ ನಾವು ನಾಲ್ಕೈದು ಸ್ನೇಹಿತರು ರಾಜಮ್ಮನ ಬಳಿ ವಿಚಾರಿಸಿದೆವು. ಅವಳು ಕಣ್ಣೀರು ಒರೆಸಿಕೊಳ್ಳುತ್ತಾ ಹೇಳಿದ ವಿಚಾರ ಇಷ್ಟು: 'ಚಿತ್ತೂರಿನಲ್ಲಿ ಅವನ ಸೋದರಮಾವನಿಗೆ ಯಾವುದೋ ದೊಡ್ಡ ಕಂಟ್ರ್ಯಾಕ್ಟ್ ಸಿಕ್ಕಿದೆ. ಮೇಲುಸ್ತುವಾರಿಗೆ ತರಬೇತಿ ಕೊಡಲು, ನಂಬಿಕೆಯ ಬಂಟನಾಗಿರಲು, ಸೋದರಳಿಯ ವೀರಾಸಾಮಿಯನ್ನು ಅವನು ಕರೆದುಕೊಂಡು ಹೋಗಿದ್ದ.' ಪರೀಕ್ಷೆ, ರಜಾ – ಇವುಗಳ ಮಧ್ಯೆ ವೀರಾಸಾಮಿ ನಮ್ಮ ನೆನಪಿನಿಂದ ಮರೆಯಾಗಿಹೋದ. ಮುಂದಿನ ವರ್ಷ ಶಾಲೆಯು ಪ್ರಾರಂಭವಾದಾಗ ರಾಜಮ್ಮ ಕೂಡ ಕಣ್ಣಿಗೆ ಕಾಣಿಸಲಿಲ್ಲ.

ಹದಿನೈದು ಇಪ್ಪತ್ತು ವರ್ಷಗಳ ಅನಂತರ ಹೈದರಾಬಾದಿನಲ್ಲಿ ನಿಧಾನಗತಿಯಲ್ಲಿ ನಡೆಯುತ್ತಿದ್ದ ಒಂದು ಪ್ರಾಜೆಕ್ಟನ್ನು ಪರಿಶೀಲಿಸಲು ನಾನು ಹೋಗಿದ್ದೆ. ಆ ಸಮಯದಲ್ಲಿ ಅಂದೇ ಒಬ್ಬ ಹೊಸ ಕಂಟ್ರಾಕ್ಟರ್ ಒಬ್ಬರು, ಸುಮಾರು ಎಪ್ಪತ್ತು ಎಂಬತ್ತು ಕೆಲಸಗಾರರೊಂದಿಗೆ ಅಲ್ಲಿಗೆ ಬಂದು ಕೆಲಸ ಪ್ರಾರಂಭಿಸಿದ್ದರು. ಅವರೊಡನೆ ಮಾತನಾಡುವಾಗ, ಆತ ಚಿತ್ತೂರಿನಿಂದ ಬಂದಿರುವುದು ಗೊತ್ತಾಯಿತು. ತಕ್ಷಣವೇ, ಅವರನ್ನು ಅಚಾನಕ್ಕಾಗಿ 'ನಿಮಗೆ ವೀರಾಸಾಮಿ ಗೊತ್ತೇ?' ಎಂದು ಕೇಳಿದೆ. ಇಂದಿಗೂ ಕೂಡ ಅಂದು ಹಾಗೆ ಯಾಕೆ ಕೇಳಿದೆ, ವೀರಾಸಾಮಿಯ ನೆನಪು ಥಟ್ಟನೆ ಹೇಗೆ ಬಂತು ಎಂಬುದು ನನಗೆ ಒಗಟಾಗಿಯೇ ಉಳಿದಿದೆ!

ಅವರು 'ಗೊತ್ತು ಸರ್. ನಮ್ಮಲ್ಲೆಲ್ಲ ಅವರೇ ಈಗ ದೊಡ್ಡ ಕಂಟ್ರಾಕ್ಟರ್! ಈಗ ಚೆನ್ನೈನಲ್ಲಿ ಇದ್ದಾರೆ. ಅಧಿಕಾರಿಗಳು, ಸಚಿವರು, ಎಂಎಲ್ಎ, ಎಂಪಿ ಎಲ್ಲರೂ ಅವರ ಸ್ನೇಹಿತರು. ಆತ ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳನ್ನು ಮಾಡುವುದರಲ್ಲಿ ಎತ್ತಿದ ಕೈ' ಎಂದರು!

ಆಶ್ಚರ್ಯಗೊಂಡ ನನಗೆ ಅವರೊಂದಿಗೆ ಮಾತುಕತೆಯಲ್ಲಿ ವೀರಾಸಾಮಿಯ ಉಳಿದ ವಿಚಾರಗಳು ತಿಳಿದು ಬಂದವು. ವೀರಾಸಾಮಿ ತನ್ನ ಸೋದರಮಾವನ ಒಬ್ಬಳೇ ಮಗಳನ್ನು ಮದುವೆಯಾಗಿದ್ದ. ಕಾಂಟ್ರಾಕ್ಟಿಗೆ ಸಂಬಂಧಿಸಿದ ಹಣಕಾಸಿನ ಖರ್ಚುವೆಚ್ಚದ ಪ್ರತಿಯೊಂದು ಅಂಕಿ–ಅಂಶಗಳು ಅತನ ತಲೆಯಲ್ಲೇ ಇರುತ್ತವೆ. ಮಾವನಂತೆ ಎಡಗೈ ಹೆಬ್ಬೆಟ್ಟಲ್ಲ; ಇಂಗ್ಲಿಷ್ನಲ್ಲಿ ಸಹಿ ಮಾಡುತ್ತಿದ್ದ. ಇಷ್ಟು ವಿವರಗಳು ಸಿಕ್ಕಿದ ಮೇಲೆ ಅವರನ್ನು 'ಸಹಿ ಮಾಡುವಾಗ 'ಐ' ಅಕ್ಷರದ ಮೇಲೆ ಸಣ್ಣ ಸೊನ್ನೆ ಸುತ್ತುತ್ತಾರೆಯೇ?' ಎಂದು ಕೇಳಿದೆ.

ಅವರು ಆಶ್ಚರ್ಯದಿಂದ 'ಹೌದು ಸರ್! ನಿಮಗೆ ಅವರು ಗೊತ್ತೇ?' ಎಂದು ನನ್ನನ್ನೇ ಕುತೂಹಲದಿಂದ ನೋಡಿದರು. ಒಂದು ವಾರದಲ್ಲಿ ಬಾಯಿಸಾಲವಾಗಿ ಕೊಂಡ ಕಳ್ಳೆಕಾಯಿ, ಚೇಪೆಕಾಯಿ, ಐಸ್ ಕ್ಯಾಂಡಿಗಳ ಲೆಕ್ಕವನ್ನು ಕರಾರುವಕ್ಕಾಗಿ ಹೇಳುತ್ತಿದ್ದ, ಲೆಕ್ಕದಲ್ಲಿ ಚುರುಕಾಗಿದ್ದ, ಚೆಂಡಾಟದಲ್ಲಿ ಕರುಣೆಯ ಜೊತೆಜೊತೆಗೆ ಜೋರಾಗಿ ಹಿಂದುರುಗಿ ಏಟು ಕೊಡುತ್ತಿದ್ದ, ಸ್ನೇಹಿತರ ಉಪಕಾರಕ್ಕೆ ಐಸ್‌ಕ್ಯಾಂಡಿ ಕೊಡಿಸುತ್ತಿದ್ದ, ಉದ್ದ ಗಾತ್ರದ ಬಾಲಕ ವೀರಾಸಾಮಿಯ ಈಗಿನ ವಿರಾಟ್ ಸ್ವರೂಪ ಕಣ್ಣಮುಂದೆ ಬಂದಿತ್ತು.

'ಹೌದು, ಅವರು ನನ್ನ ಸಹಪಾಠಿಯಾಗಿದ್ದರು...' ಎಂದೆ; ಯಾವ ತರಗತಿಯಲ್ಲಿ, ಎಷ್ಟು ದಿನ ಎಂದು ತಿಳಿಸಲಿಲ್ಲ.

ಪ್ರತಿಕ್ರಿಯಿಸಿ: **feedback@sudha.co.in**